KACM510002662025

<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ , ನ.ರಾ.ಪುರ</u>

**ಸಿ ಸಿ ನಂ.39/2025**

ಫಿರ್ಯಾದಿ ಃ ಸರ್ಕಾರ (ಎನ್ ಆರ್ ಪುರ ಪೊಲೀಸರಿಂದ)

ವಿರುದ್ಧ

ಆರೋಪಿತರು ಃ 2. ಕರಣ್ ಕುಮಾರ್, ಬಿನ್ ಸಂಪತ್ ಕುಮಾರ್,
26 ವರ್ಷ,
ವಾಸಃ ಗುರುಪುರ ಗ್ರಾಮ,
ಬರ್ಗೆನಹಳ್ಳಿ ಅಂಚೆ, ತರೀಕೆರೆ ತಾಲ್ಲೂಕು.

<u>ಭಾರತೀಯ ನಾಗರಿಕ ಸುರಕ್ಷಾ ಸಂಹಿತ ಕಲಂ 351 ರ ಪ್ರಕಾರ ಆರೋಪಿತರ ಹೇಳಿಕೆ</u>

ಪ್ರಶ್ನೆ : 1 ಅಭಿಯೋಜನೆಯ ಪರ ಸಾಕ್ಷಿದಾರರು ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರಃ

ಪ್ರಶ್ನೆ : 2 ಪ್ರಾಸ 1 ನಿರಂಜನ್ ಗೌಡ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 01.06.2025 ರಂದು ಬೆಳಿಗ್ಗೆ 11-00 ರ ಸುಮಾರಿಗೆ ತಾವು ತಮ್ಮ ಸಿಬ್ಬಂಧಿಯಾದ ಚಾಸಾ 4 ಮತ್ತು 5 ರವರೊಂದಿಗೆ ತಮ್ಮ ಇಲಾಖಾ ಜೀಪಿನಲ್ಲಿ ಗಸ್ತಿನಲ್ಲಿ ಇರುವಾಗ ಬಾತ್ಮೀದಾರರಿಂದ ಒಂದು ಅಶೋಕ್ ಲೇ ಲ್ಯಾಂಡ್ ಗೂಡ್ಸ್ ವಾಹನದಲ್ಲಿ ಅಕ್ರಮವಾಗಿ ಯಾವುದೆ ಪರವಾನಗಿ ಇಲ್ಲದೆ ಜಾನುವಾರುಗಳನ್ನು ತುಂಬಿಕೊಂಡು ಬಾಳೆಹೊನ್ನೂರು ಕಡೆಯಿಂದ ಎನ್.ಆರ್.ಪುರ ಕಡೆಗೆ ಸಾಗಾಟ ಮಾಡುತ್ತಿದ್ದಾರೆ ಎಂಬ ಬಾತ್ಮಿಯ ಮೇರೆಗೆ ತಾವು ಚಾಸಾ-6 ರಿಂದ 8 ರವರಿಗೆ ಬಿ.ಹೆಚ್. ಕೈಮರಕ್ಕೆ ಬರುವಂತೆ ಹಾಗೂ ಚಾಸಾ-2 ಮತ್ತು 3 ರವರಿಗೆ ಪಂಚನಾಮೆಗೆ ಸಹಕರಿಸುವಂತೆ ಕೋರಿದ್ದು, ಮದ್ಯಾಹ್ನ 12-00 ರ ಸುಮಾರಿಗೆ ಬಾಳೆಹೊನ್ನೂರು ಕಡೆಯಿಂದ ಒಂದು ಅಶೋಕ್ ಲೇ ಲ್ಯಾಂಡ್ ಗೂಡ್ಸ್ ವಾಹನ ಬಂದಿದ್ದು, ಅದನ್ನು ಶಾಂತಿಭವನದ ಬಳಿ ತಡೆದು ನಿಲ್ಲಿಸಿ ಪಂಚರ ಸಮಕ್ಷಮ ಪರಿಶೀಲಿಸಲಾಗಿ ಅದರ ನೋಂದಣಿ ಸಂಖ್ಯೆ.ಕೆಎ.66 – 4542 ಇದ್ದು, ಸದರಿ ವಾಹನದಲ್ಲಿ 6 ಜಾನುವಾರುಗಳನ್ನು ಹಿಂಸಾತ್ಮಕ ರೀತಿಯಲ್ಲಿ ತುಂಬಿಕೊಂಡಿರು ವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ

KACM510002662025

ಪ್ರಶ್ನೆ : 3 ಪ್ರಾಸಾ 1 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಜಾನುವಾರುಗಳನ್ನು ಸಾಗಿಸಲು ಪರವಾನಿಗೆ ಇರುವ ಬಗ್ಗೆ ಕೇಳಲಾಗಿ ತಾವು ಯಾವುದೆ ಪರವಾನಿಗೆ ಇರುವುದಿಲ್ಲವೆಂದು ತಿಳಿಸಿದ್ದು, ಸದರಿ ಜಾನುವಾರುಗಳನ್ನು ದಾವಣ ಗ್ರಾಮದ ಮಂಜು ಇವರ ಕಡೆಯಿಂದ ಖರೀದಿಸಿದ್ದಾಗಿ ಹಾಗೂ ಸದರಿ ವಾಹನ, ಜಾನುವಾರು ಹಾಗೂ ನಿಮ್ಮನ್ನು ವಶಕ್ಕೆ ಪಡೆದು ಮದ್ಯಾಹ್ನ 12-00 ರಿಂದ 12-40 ರವರೆಗೆ ಪಂಚರ ಸಮಕ್ಷಮ ಮಹಜರ್ ಮಾಡಿ, ಭಾವಚಿತ್ರಗಳನ್ನು ತೆಗೆದು ಮದ್ಯಾಹ್ನ 1-00 ಗಂಟೆಗೆ ಠಾಣೆಗೆ ಬಂದು ವರದಿ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ: [signature]

ಪ್ರಶ್ನೆ :4 ಪ್ರಾಸಾ 4 ಮಧು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 01.06.2025 ರಂದು ಬೆಳಿಗ್ಗೆ 11-00 ರ ಸುಮಾರಿಗೆ ಚಾಸಾ-1 ರವರೊಂದಿಗೆ ತಾವು ಮತ್ತು ಚಾಸಾ-5 ರವರು ತಮ್ಮ ಇಲಾಖಾ ಜೀಪಿನಲ್ಲಿ ಗಸ್ತಿನಲ್ಲಿ ಇರುವಾಗ ಬಾತ್ಮೀದಾರರಿಂದ ಒಂದು ಅಶೋಕ್ ಲೇ ಲ್ಯಾಂಡ್ ಗೂಡ್ಸ್ ವಾಹನದಲ್ಲಿ ಅಕ್ರಮವಾಗಿ ಯಾವುದೆ ಪರವಾನಗಿ ಇಲ್ಲದೆ ಜಾನುವಾರುಗಳನ್ನು ತುಂಬಿಕೊಂಡು ಬಾಳೆಹೊನ್ನೂರು ಕಡೆಯಿಂದ ಎನ್.ಆರ್.ಪುರ ಕಡೆಗೆ ಸಾಗಾಟ ಮಾಡುತ್ತಿದ್ದಾರೆ ಎಂಬ ಬಾತ್ಮಿಯ ಮೇರೆಗೆ ಚಾಸಾ-1 ರವರು ಚಾಸಾ-6 ರಿಂದ 8 ರವರಿಗೆ ಬಿ.ಹೆಚ್. ಕೈಮರಕ್ಕೆ ಬರುವಂತೆ ಹಾಗೂ ಚಾಸಾ-2 ಮತ್ತು 3 ರವರಿಗೆ ಪಂಚನಾಮೆಗೆ ಸಹಕರಿಸುವಂತೆ ಕೋರಿದ್ದು, ಮದ್ಯಾಹ್ನ 12-00 ರ ಸುಮಾರಿಗೆ ಬಾಳೆಹೊನ್ನೂರು ಕಡೆಯಿಂದ ಒಂದು ಅಶೋಕ್ ಲೇ ಲ್ಯಾಂಡ್ ಗೂಡ್ಸ್ ವಾಹನ ಬಂದಿದ್ದು, ಅದನ್ನು ಶಾಂತಿಭವನದ ಬಳಿ ತಡೆದು ನಿಲ್ಲಿಸಿ ಪಂಚರ ಸಮಕ್ಷಮ ಚಾಸಾ-1 ರವರು ಪರಿಶೀಲಿಸಲಾಗಿ ಅದರ ನೋಂದಣಿ ಸಂಖ್ಯೆ.ಕೆಎ.66 – 4542 ಇದ್ದು, ಸದರಿ ವಾಹನದಲ್ಲಿ 6 ಜಾನುವಾರುಗಳನ್ನು ಹಿಂಸಾತ್ಮಕ ರೀತಿಯಲ್ಲಿ ತುಂಬಿ ಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ: [signature]

ಪ್ರಶ್ನೆ :5 ಪ್ರಾಸ 4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಜಾನುವಾರುಗಳನ್ನು ಸಾಗಿಸಲು ಪರವಾನಿಗೆ ಇರುವ ಬಗ್ಗೆ ಚಾಸಾ-1 ರವರು ಕೇಳಲಾಗಿ ತಾವು ಯಾವುದೆ ಪರವಾನಿಗೆ ಇರುವುದಿಲ್ಲವೆಂದು ತಿಳಿಸಿದ್ದು, ಸದರಿ ಜಾನುವಾರುಗಳನ್ನು ದಾವಣ ಗ್ರಾಮದ ಮಂಜು ಇವರ ಕಡೆಯಿಂದ ಖರೀದಿಸಿದ್ದಾಗಿ ಹಾಗೂ ಸದರಿ ವಾಹನ, ಜಾನುವಾರು ಹಾಗೂ ನಿಮ್ಮನ್ನು ವಶಕ್ಕೆ ಪಡೆದು ಮದ್ಯಾಹ್ನ 12-00 ರಿಂದ 12-40 ರವರೆಗೆ ಪಂಚರ ಸಮಕ್ಷಮ ಮಹಜರ್ ಮಾಡಿ, ಭಾವಚಿತ್ರಗಳನ್ನು ತೆಗೆದು ಮದ್ಯಾಹ್ನ 1-00 ಗಂಟೆಗೆ ಠಾಣೆಗೆ ಬಂದು ಚಾಸಾ-1 ರವರು ವರದಿ ನೀಡಿರುವುದಾಗಿ ಹಾಗೂ ತಾವು ಆ

.ಬಗ್ಗೆ ಹೇಳಿಕೆ ಕೊಟ್ಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ : 6 ಪ್ರಾಸಾ 5 ಶ್ರೀ ದರ್ಶನ್ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 01.06.2025 ರಂದು ದಾವಣ ಗ್ರಾಮದ ಮಂಜು ವಾಸದ ಮನೆಯ ಮುಂಭಾಗ ಸಂಜೆ 4-00 ಗಂಟೆಯ ಸಮಯಕ್ಕೆ ನಮ್ಮ ಸಮಕ್ಷಮ ಪಂಚನಾಮೆ ಮಾಡಿದ ಬಗ್ಗೆ ಮತ್ತು ಭಾವಚಿತ್ರವನ್ನು ತೆಗೆದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ : 7 ಪ್ರಾಸಾ 6 ಡಾಃ ಪ್ರೀತಮ್ ಕುಮಾರ್, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 01.06.2025 ರಂದು ಈ ಪ್ರಕರಣದ ತನಿಖಾಧಿಕಾರಿ ಜಾನುವಾರುಗಳನ್ನು ಪರೀಕ್ಷಿಸಿ ವರದಿ ನೀಡುವಂತೆ ಮನವಿ ಮಾಡಿದ್ದು, ದಿನಾಂಕಃ 03.06.2025 ರಂದು ಬಸ್ತಿ ಮಠದ ಗೋಶಾಲೆಗೆ ಭೇಟಿ ನೀಡಿ 6 ಜಾನುವಾರುಗಳನ್ನು ಪರೀಕ್ಷಿಸಿ ದಿನಾಂಕಃ 11.06.2025 ರಂದು ವರದಿ ನೀಡಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ : 8 ಪ್ರಾಸಾ 7 ಶ್ರೀಮತಿ ಜ್ಯೋತಿ ಎನ್.ಎ., ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 01.06.2025 ರಂದು ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ವರದಿ, ಮಹಜರ್, ಆರೋಪಿತರು ಹಾಗೂ ವಾಹನವನ್ನು ತಂದು ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿ ತಮ್ಮ ಠಾಣಾ ಗುನ್ನಾ ಸಂಖ್ಯೆ 46/2025 ರಲ್ಲಿ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗೆ ಕಳು ಹಿಸಿದ ಬಗ್ಗೆ ನಂತರ ಜಾನುವಾರುಗಳನ್ನು ಪರೀಕ್ಷೆ ಮಾಡಲು ಪಶು ವೈದ್ಯಾಧಿಕಾರಿಗೆ ಮನವಿ ಸಲ್ಲಿಸಿದ ಬಗ್ಗೆ ಹಾಗೂ ಜಾನುವಾರುಗಳನ್ನು ಗೋಶಾಲೆ, ಬಸ್ತಿ ಮಠಕ್ಕೆ ಬಿಡಲು ಅನುಮತಿ ಪಡೆದುಕೊಂಡ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ : 9 ಪ್ರಾಸಾ 7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ಸಂಜೆ 4-00 ಗಂಟೆಯಿಂದ 6-00 ಗಂಟೆಯ ಅವಧಿಯಲ್ಲಿ ಆರೋಪಿ 3 ರವರ ಮನೆಯ ಮುಂದೆ ಕೃತ್ಯ ಸ್ಥಳದ ಪಂಚನಾಮೆಯನ್ನು ಮಾಡಿದ ಬಗ್ಗೆ ಹಾಗೂ ಆರೋಪಿ 3 ರವರು ನಿರೀಕ್ಷಣಾ ಜಾಮೀನು ಪಡೆದುಕೊಂಡು ಬಂದಿದ್ದು, ಅವರ ವಿರುದ್ಧ ದಸ್ತಗಿರಿ ಕ್ರಮ

ಅನುಸರಿಸಿ ಬಿಡುಗಡೆಗೊಳಿಸಿದ ಬಗ್ಗೆ ಅದೇ ದಿನ ಚಾಸಾ-2 ರಿಂದ 8 ರವರ ಹೇಳಿಕೆಗಳನ್ನು ಪಡೆದುಕೊಂಡ ಬಗ್ಗೆ ದಿನಾಂಕಃ 12.08.2025 ರಂದು ಚಾಸಾ-10 ರವರಿಂದ ದಾಖಲಾತಿಗಳನ್ನು ಪಡೆದುಕೊಂಡ ಬಗ್ಗೆ ಹಾಗೂ ದಿನಾಂಕಃ 02.06.2025 ರಂದು ಚಾಸಾ-6 ರವರಿಂದ ದೃಢೀಕರಣ ಪತ್ರ ಪಡೆದುಕೊಂಡ ಬಗ್ಗೆ ದಿನಾಂಕಃ 14.08.2025 ರಂದು ಚಾಸಾ-11 ರವರಿಗೆ ವಾಹನಕ್ಕೆ ಸಂಬಂಧಪಟ್ಟ ದಾಖಲಾತಿಯನ್ನು ಒದಗಿಸುವಂತೆ ಕೋರಿಕೊಂಡ ಬಗ್ಗೆ ಹಾಗೂ ಅವರಿಂದ ಉತ್ತರ ಪಡೆದು ಕಡತಕ್ಕೆ ಅಳವಡಿಸಿಕೊಂಡ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ : 10 ನೀವು ಏನಾದರು ಹೇಳುವುದು ಇದೆಯೇ?

ಉತ್ತರಃ

ಪ್ರಶ್ನೆ : 11 ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ ?

ಉತ್ತರಃ

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗು ಸರಿಯಾಗಿದೆ ಎಂದು ದೃಢಿಕರಿಸಲಾಗಿದೆ.

ದಿನಾಂಕ **19** ನೇ ದಿವಸ ಮೇ ಮಾಹೆ **2026** ನೇ ಇಸವಿ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್‌ಸಿ ನ.ರಾ.ಪುರ.

ಆರೋಪಿ ಸಹಿ ಃ